# ಮಕ್ಕಳಿಗಾಗಿ ಬೈಬಲ್

ಅರ್ಪಿಸುವ



## ಐಶ್ವರ್ಯವಂತನು, ಬಡವನು

ಬರಹಗಾರರು: Edward Hughes

ಚಿತ್ರಲೇಖಕರು: M. Maillot; Lazarus

ಅಳವಡಿಸುವವರು: M. Maillot; Sarah S.

ಪದ್ಮಾ ಸೈಲೇಸ್: Vinay Shirol

ತಯಾರಕರು: Bible for Children
www.M1914.org

©2014 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.

ಯೇಸುಸ್ವಾಮಿಗೆ ತಿಳಿದಿತ್ತು ಅದೇನೆಂದರೆ ಅನೇಕ ದಾರ್ಮಿಕ ನಾಯಕರು
ಹಣವನ್ನು ದೇವರಿಗಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದರೆಂಬುದಾಗಿ,
ಆತನು ಇಬ್ಬರಿಗೆ ಏನಾಯಿತು ಎಂಬುದನ್ನು ಹೇಳಿದ,
ದೇವರಿಲ್ಲದೆ ಐಶ್ವರ್ಯ ಹೊಂದುವುದು ವ್ಯರ್ಥ,
ಐಶ್ವರ್ಯದಿಂದ ಸ್ವರ್ಗದ ಜೀವಿತವನ್ನು
ಖರಿದೀಸಲಾಗುವದಿಲ್ಲ.



ಒಬ್ಬಾನೊಬ್ಬ ಶ್ರೀಮಂತನಿದ್ದನು
ಆತನಿಗೆ ಬಹಳ ಬೆಲೆಯುಳ್ಳಂತಹ
ಸುಂದರವಾದ ವಸ್ತ್ರಗಳಿದ್ದವು.
ಆತನು ಒಬ್ಬ ರಾಜನ ಹಾಗೆ
ವಸ್ತ್ರದರಿಸುತ್ತಿದ್ದನು.



ಒಬ್ಬ ಬಡವನು ಸಹ ಸಂತೃಪ್ತಿಯಾಗಿ ಊಟಮಾಡುತ್ತೀದ್ದನು. ಪ್ರತಿಯೊಂದು ಊಟವು ಔತನದ ಹಾಗೆ ಇರುತ್ತಿತ್ತು. ಆತನಲ್ಲಿ ಊಟಕ್ಕೆ, ಉಪಹಾರಕ್ಕೆ ಹಾಗೂ ರಾತ್ರಿ ಊಟವನ್ನು ಕರಿದಿಸಲು ಬೇಕಾಗುವಷ್ಟು ಹಣವಿತ್ತಲ್ಲದೆ, ಕರಿದ ತಿಂಡಿಯನ್ನು ಸಹ ತೆಗೆದುಕೊಳಬಹುದಾಗಿತ್ತು.



ಒಬ್ಬ ಶ್ರೀಮಂತನ ಮನೆಯ ಬಾಗಿಲಿನ ಮುಂದೆ ಒಬ್ಬ ಬಡ ಅನಾರೋಗ್ಯದಿಂದ ಕೂಡಿದ, ಹಸಿವಿನಿಂದ ಬಳಲುವ, ವ್ಯಕ್ತಿಯಿದ್ದನು ಆತನ ಹೆಸರು ಲಾಜರನು ಎಂಬುದಾಗಿ.





ಬಡವನಾದ ಲಾಜರನು ಮೈತುಂಬಾ ಹುಣ್ಣುಗಳಿಂದ ಬಳಲುತ್ತಿದ್ದನು. ಆತನಿಗೆ ಯಾವುದಾದರೂ ರೋಗವಿರಬಹುದು. ಒಂದು ವೇಳೆ ಜನರಿಂದ ಹೊಡೆತವಾಗಲಿ ನಿಂದೆಯಾಗಲಿ ಆತನು ಅನುಭವಿಸಿರಬಹುದು. ಆತನಿಗೆ ಒಳ್ಳೆಯ ಹಾಲು, ಮಾಂಸ ಅಥವಾ ತರಕಾರಿಯ ಆಹಾರವನ್ನು ಸೇವಿಸದೆ ಇರುವದರಿಂದ ಹುಣ್ಣುಗಳು ಬಂದಿರಬಹುದು.

ಲಾಜರನು ಆಹಾರಕ್ಕಾಗಿ
ಎದುರು ನೋಡಿದನು,
ಆತನು ಐಶ್ವರ್ಯವಂತನ
ಮೇಜಿನಿಂದ ಬೀಳುವ
ಎಂಜಲನ್ನು ತಿಂದು
ಸಂತೋಷವಾಗಿದ್ದನು.



ಕೆಲವೊಂದು ಸಾರಿ
ನಾಯಿಗಳು ಬಂದು
ಅಸಾಯಕ ಬಡ
ಭೀಕ್ಷುಕನ ಹುಣ್ಣನ್ನು
ನೆಕ್ಕುತ್ತಿದ್ದವು.
ಲಾಜರನು
ಹಸಿವೆಯಿಂದ
ಬಳಲುವುದನ್ನು
ಕಂಡು ಯಾರು
ಸಹಾಯಮಾಡಲಿಲ್ಲ.



ಒಂದು ದಿನ ಬೆಳಿಗ್ಗೆ
ಲಾಜರನು ನಿದ್ದೆಯಿಂದ
ಏಳಲೆ ಇಲ್ಲ.
ಹಸಿವೆಯಿಂದ.
ಸ್ನೇಹಿತರಿಲ್ಲದಂತಹ
ಜೀವಿತವನ್ನು
ತ್ಯಜಿಸಿದ್ದನು. ಅಂದರೆ
ಲಾಜರನು ಸತ್ತಿದ್ದನು.



ಲಾಜರನು ಸತ್ತ ಕ್ಷಣದಿಂದ ಆನಂದದ ಸಮಯ ಆತನಿಗೆ ಪ್ರಾರಂಬವಾಯಿತು. ಲಾಜರನು ಸತ್ತನಂತರ ಆತನನ್ನು ದೇವದೂತರು ಹೋತ್ತುಕೊಂಡು ಅಬ್ರಹಾಮನ ಬಳಿಗೆ ಕರೆದುಕೊಂಡು ಹೊದರೆಂದು ಯೇಸು ಹೇಳಿದನು. ಲಾಜರನು ದೇವರಿಂದ ಸಂತೈಸಲ್ಪಟ್ಟನು.



ಅದೇ ರೀತಿ ಐಶ್ವರ್ಯವಂತನು ಸಹ ಸತ್ತನು, ತನ್ನ ಎಲ್ಲಾ ಐಶ್ವರ್ಯವು ಅವನ ಜೀವನವನ್ನು ರಕ್ಷಿಸಲಾಗಲಿಲ್ಲ. ಸಾವು ಬಂದಾಗ ಅದನ್ನು ತಡೆಯಲು ಯಾರಿಂದಲು ಸಾದ್ಯವಿಲ್ಲ.



ಐಶ್ವರ್ಯವಂತನ ಶವ ಸಂಸ್ಕಾರವಾಯಿತು, ಬಹುಶ: ಬಹಳ ಜನ ಆತನ ಅಂತ್ಯಸಂಸ್ಕಾರದಲ್ಲಿ ಪಾಲ್ಗೊಂಡು ಆತನು ಒಳ್ಳೆಯವನು. ತುಂಬಾ ಬುದ್ಧಿವಂತ ಮತ್ತು ಯಶಸ್ಸನ್ನು ಕಂಡಂತಹ ವ್ಯಕ್ತಿಯಿಂದು ಹೂಗಲಿರಬಹುದು. ಆದರೆ ಇಂತಹ ಹೊಗಳಿರಬಹುದು. ಆದರೆ ಇಂತಹ ಹೊಗಳಿಕೆಗಳು ಆತನಿಗೆ ಯಾವುದೆ ಸಹಾಯಮಾಡಲಿಲ್ಲ

ಏಕೆಂದರೆ ಆತನು ನರಕದಲ್ಲಿದ್ದನು.



ನರಕದಲ್ಲಿ ಐಶ್ವರ್ಯವಂತನು 'ತಂದೆಯೆ, ಅಬ್ರಹಾಮನೆ, ಲಾಜರನನ್ನು ಕಳುಹಿಸು ಅವನು ತನ್ನ ತುದಿಬೆರಳನ್ನು ನೀರಿನಲ್ಲಿ ಅದ್ದಿ ನನ್ನ ನಲಿಗೆಯನ್ನು ತಣ್ಣಗೆ ಮಾಡಲಿ, ಈ ಉರಿಯಲ್ಲಿ ಸಂಕಟಪಡುತ್ತೆನೆ' ಎಂದು ಕೂಗಿ ಹೇಳಿದನು.



"ನೀನು ಅಶಿಸಿದ ಸುಖವನ್ನು ನಿನ್ನ
ಜೀವನದಲ್ಲಿ ಹೊಂದಿದಿ ಆದರೆ ಲಾಜರನಿಗೆ
ಏನು ಇರಲಿಲ್ಲ" ಎಂದು ಅಬ್ರಹಾಮನು
ಆತನನ್ನು ನೆನಪಿಸಿದನು. ಈಗಲಾದರು
ಲಾಜರನಿಗೆ ಸಮಧಾನ, ನೀನಗೆ
ಸಂಕಟವಿದೆ. ನಮ್ಮ ಮಧ್ಯದಲ್ಲಿರಿವ
ಡೊಂಗರವನ್ನು ನಾವಾಗಲಿ ನೀನಾಗಲಿ
ದಾಟಿ ಹೂಗಲಾಗದು.



ನನ್ನ ಐದು ಅಣ್ಣತಮ್ಮಂದಿರನ್ನು ಎಚ್ಚರಿಸಲು
ಲಾಜರನನ್ನು ಅವರ ಬಳಿಗೆ ಕಳುಹಿಸಿ ಕೊಡಬೇಕು
ಎಂದು ಮೊರೆಯಿಟ್ಟು 'ಇಲ್ಲವಾದರೆ ನಾನಿರುವಂತಹ
ಉರಿಯುವಂತಹ ಸ್ಥಳಕ್ಕೆ ಅವರು ಸಹ ಬಂದಾರು'
ಎಂದು ಕೂಗಿದನು.



"ನಿನ್ನ ಸಹೋದರರನ ಹತ್ತಿರ ದೇವರ ವಾಕ್ಯವುಂಟಲ್ಲ" ಎಂದು ಅಬ್ರಹಾಮನು ಉತ್ತರಕೊಟ್ಟನು. ಆ ನಿನ್ನ ಐದು ಅಣ್ಣತಮ್ಮಂದಿರು ಸತ್ಯವೇದವನ್ನೇ ನಂಬದೆ ಇರುವಾಗ, ಲಾಜರನು ಸತ್ತು ಎದ್ದು ಬಂದ ಎಂಬುದನ್ನು ಸಹ ಅವರು ನಂಬುವುದಿಲ್ಲ ಎಂದು ಹೇಳಿದನು.



ಯೇಸು ಐಶ್ವರ್ಯವಂತನ ಮತ್ತು ಲಾಜರನ ಕಥೆಯನ್ನು ಹೇಳಿ ಮುಗಿಸಿದಾಗ ಅಲ್ಲಿದ್ದ ಧಾರ್ಮಿಕ ನಾಯಕರು ತಮ್ಮನ್ನು ಈ ರೀತಿ ಪರೀಕ್ಷಿಕೊಂಡಿರಬಹುದು "ನಾನು ದೇವರಿಗಿಂತ ಹೆಚ್ಚಾಗಿ ಐಶ್ವರ್ಯವನ್ನು ಪ್ರಿತಿಸುತ್ತೇನಾ"? ಇದರಿಂದ ಅವರಿಗೆ ಗೊತ್ತಾಯಿತು ದೇವರ ವಾಕ್ಯಕ್ಕೆ ಗಮನ ಕೊಡದಿದ್ದರೆ ಎನಗುತ್ತದೆ ಎಂಬುದಾಗಿ.



# ಐಶ್ವರ್ಯವಂತನು, ಬಡವನು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

**ಲೂಕ 16**

“ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು.”

**ಕೀರ್ತನೆ 119:130**

# ಮುಕ್ತಾಯ

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು. ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!
ಯೋಹಾನ 3:16